ಅಲ್ಲಾಹನ ಸಂದೇಶವಾಹಕರಿಗೆ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) 'ವಹೀ' (ದೇವವಾಣಿ) ಪ್ರಾರಂಭವಾಗಿದ್ದು ನಿದ್ರೆಯಲ್ಲಿನ ಸತ್ಯವಾದ ಕನಸುಗಳ ಮೂಲಕ

ಸತ್ಯವಿಶ್ವಾಸಿಗಳ ಮಾತೆ ಆಯಿಷಾ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರಿಗೆ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) 'ವಹೀ' (ದೇವವಾಣಿ) ಪ್ರಾರಂಭವಾಗಿದ್ದು ನಿದ್ರೆಯಲ್ಲಿನ ಸತ್ಯವಾದ ಕನಸುಗಳ ಮೂಲಕ. ಅವರು ಯಾವುದೇ ಕನಸನ್ನು ಕಂಡರೂ, ಅದು ಬೆಳಗಿನ ಜಾವದ ಬೆಳಕಿನಂತೆ ನಿಜವಾಗುತ್ತಿತ್ತು. ನಂತರ, ಅವರಿಗೆ ಏಕಾಂತವಾಸವು ಇಷ್ಟವಾಯಿತು. ಅವರು 'ಹಿರಾ' ಗುಹೆಯಲ್ಲಿ ಏಕಾಂತದಲ್ಲಿರುತ್ತಿದ್ದರು, ಮತ್ತು ತಮ್ಮ ಕುಟುಂಬದ ಬಳಿಗೆ ಮರಳಿ ಬರುವ ಮೊದಲು ಅನೇಕ ರಾತ್ರಿಗಳವರೆಗೆ ಅದರಲ್ಲಿ (ಗುಹೆಯಲ್ಲಿ) 'ತಹನ್ನುಸ್' (ಆರಾಧನೆ) ಮಾಡುತ್ತಿದ್ದರು. ಇದಕ್ಕಾಗಿ ಅವರು ಆಹಾರ ಸಿದ್ಧತೆ ಮಾಡಿಕೊಂಡು ಹೋಗುತ್ತಿದ್ದರು. ನಂತರ ಅವರು (ತಮ್ಮ ಪತ್ನಿ) ಖದೀಜಾ ರವರ ಬಳಿಗೆ ಮರಳಿ, ಮತ್ತೆ ಅಷ್ಟೇ ರಾತ್ರಿಗಳಿಗಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಕೊನೆಗೆ ಅವರು ಹಿರಾ ಗುಹೆಯಲ್ಲಿದ್ದಾಗ ಸತ್ಯವು ಅವರ ಬಳಿಗೆ ಬಂದಿತು. ದೇವದೂತ ಜಿಬ್ರೀಲ್ ರವರು ಅವರ ಬಳಿಗೆ ಬಂದು ಹೇಳಿದರು: "ಓದಿರಿ". (ಪ್ರವಾದಿ) ಹೇಳಿದರು: "ನನಗೆ ಓದಲು ಬರುವುದಿಲ್ಲ". ಅವರು (ಪ್ರವಾದಿ) ಹೇಳುತ್ತಾರೆ: "ಆಗ ಅವರು (ಜಿಬ್ರೀಲ್) ನನ್ನನ್ನು ಹಿಡಿದು ಬಿಗಿದಪ್ಪಿದರು. ಎಷ್ಟರಮಟ್ಟಿಗೆ ಎಂದರೆ ನನಗೆ ತೀವ್ರ ಸಂಕಷ್ಟ ಅನುಭವವಾಯಿತು. ನಂತರ ಅವರು ನನ್ನನ್ನು ಬಿಟ್ಟು, 'ಓದಿರಿ' ಎಂದು ಹೇಳಿದರು. ನಾನು ಹೇಳಿದೆನು: 'ನನಗೆ ಓದಲು ಬರುವುದಿಲ್ಲ'. ಆಗ ಅವರು ನನ್ನನ್ನು ಎರಡನೇ ಬಾರಿಗೆ ಹಿಡಿದು ಬಿಗಿದಪ್ಪಿದರು. ಎಷ್ಟರಮಟ್ಟಿಗೆ ಎಂದರೆ ನನಗೆ ತೀವ್ರ ಸಂಕಷ್ಟ ಅನುಭವವಾಯಿತು. ನಂತರ ಅವರು ನನ್ನನ್ನು ಬಿಟ್ಟು 'ಓದಿರಿ' ಎಂದು ಹೇಳಿದರು. ನಾನು ಹೇಳಿದೆನು: 'ನನಗೆ ಓದಲು ಬರುವುದಿಲ್ಲ'. ಆಗ ಅವರು ನನ್ನನ್ನು ಮೂರನೇ ಬಾರಿಗೆ ಹಿಡಿದು ಬಿಗಿದಪ್ಪಿದರು. ನಂತರ ನನ್ನನ್ನು ಬಿಟ್ಟು ಹೇಳಿದರು: “ಸೃಷ್ಟಿಸಿದ ನಿಮ್ಮ ಪರಿಪಾಲಕನ (ಅಲ್ಲಾಹನ) ಹೆಸರಿನಿಂದ ಓದಿರಿ. ಅವನು ಮನುಷ್ಯನನ್ನು 'ಅಲಖ್' (ರಕ್ತದ ಹೆಪ್ಪುಗಟ್ಟಿದ ತುಂಡಿ) ನಿಂದ ಸೃಷ್ಟಿಸಿದನು. ಓದಿರಿ, ಮತ್ತು ನಿಮ್ಮ ಪರಿಪಾಲಕನು ಮಹಾ ಉದಾರಿಯಾಗಿದ್ದಾನೆ.” [ಸೂರ ಅಲ್-ಅಲಖ್: 1-3]". ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಅದರೊಂದಿಗೆ (ಆ ವಚನಗಳೊಂದಿಗೆ) ತಮ್ಮ ಹೃದಯವು ಕಂಪಿಸುತ್ತಿದ್ದಂತೆ (ಭಯಭೀತರಾಗಿ) ಹಿಂತಿರುಗಿದರು. ಅವರು ಖದೀಜಾ ಬಿಂತ್ ಖುವೈಲಿದ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರವರ ಬಳಿ ಬಂದು ಹೇಳಿದರು: "ನನ್ನನ್ನು ಹೊದಿಸಿರಿ! ನನ್ನನ್ನು ಹೊದಿಸಿರಿ!". ಅವರು (ಖದೀಜಾ) ಅವರನ್ನು ಹೊದಿಸಿದರು. ಕೊನೆಗೆ ಅವರ ಭಯವು ದೂರವಾದಾಗ, ಅವರು ಖದೀಜಾ ರಿಗೆ ನಡೆದ ಸಂಗತಿಯನ್ನು ವಿವರಿಸಿ, "ನನಗೆ ನನ್ನ ಪ್ರಾಣದ ಬಗ್ಗೆ ಭಯವಾಗುತ್ತಿದೆ" ಎಂದರು. ಆಗ ಖದೀಜಾ ಹೇಳಿದರು: "ಇಲ್ಲ! ಅಲ್ಲಾಹನಾಣೆ, ಅಲ್ಲಾಹು ನಿಮ್ಮನ್ನು ಎಂದಿಗೂ ಅವಮಾನಿಸುವುದಿಲ್ಲ. ಖಂಡಿತವಾಗಿಯೂ ನೀವು ಸಂಬಂಧಗಳನ್ನು ಬೆಸೆಯುತ್ತೀರಿ, ಭಾರವನ್ನು (ಅಶಕ್ತರ ಹೊರೆಯನ್ನು) ಹೊರುತ್ತೀರಿ, ಇಲ್ಲದವನಿಗೆ ಸಂಪಾದಿಸಿ ಕೊಡುತ್ತೀರಿ, ಅತಿಥಿ ಸತ್ಕಾರ ಮಾಡುತ್ತೀರಿ, ಮತ್ತು ಸತ್ಯದ ಕಾರಣದಿಂದ ಉಂಟಾದ ವಿಪತ್ತುಗಳಲ್ಲಿ (ಜನರಿಗೆ) ಸಹಾಯ ಮಾಡುತ್ತೀರಿ". ನಂತರ ಖದೀಜಾ ಅವರನ್ನು ವರಖಾ ಇಬ್ನ್ ನೌಫಲ್ ಇಬ್ನ್ ಅಸದ್ ಇಬ್ನ್ ಅಬ್ದುಲ್ ಉಝ್ಝಾ ರವರ ಬಳಿಗೆ ಕರೆದುಕೊಂಡು ಹೋದರು. ಅವರು (ವರಖಾ) ಖದೀಜಾ ರವರ ಸೋದರ ಸಂಬಂಧಿಯಾಗಿದ್ದರು. ಅವರು ಅಜ್ಞಾನ ಕಾಲದಲ್ಲಿ ಕ್ರೈಸ್ತ ಧರ್ಮವನ್ನು ಸ್ವೀಕರಿಸಿದ್ದರು. ಅವರು ಹೀಬ್ರೂ ಭಾಷೆಯಲ್ಲಿ ಬರೆಯಬಲ್ಲವರಾಗಿದ್ದರು, ಮತ್ತು ಇಂಜೀಲ್ ಗ್ರಂಥದಿಂದ ಅಲ್ಲಾಹು ಇಚ್ಛಿಸಿದಷ್ಟನ್ನು ಹೀಬ್ರೂ ಭಾಷೆಯಲ್ಲಿ ಬರೆಯುತ್ತಿದ್ದರು. ಅವರಿಗೆ ಬಹಳ ವಯಸ್ಸಾಗಿತ್ತು ಮತ್ತು ಅವರು ಕುರುಡರಾಗಿದ್ದರು. ಖದೀಜಾ ಹೇಳಿದರು: "ಓ ನನ್ನ ಚಿಕ್ಕಪ್ಪನ ಮಗನೇ, ನಿಮ್ಮ ಸಹೋದರನ ಮಗನಿಂದ (ನಡೆದ ಸಂಗತಿಯನ್ನು) ಕೇಳಿರಿ". ವರಖಾ ಕೇಳಿದರು: "ಓ ನನ್ನ ಸಹೋದರನ ಮಗನೇ, ನೀನು ಏನನ್ನು ನೋಡಿದ್ದೀಯಾ?"

[صحيح] [متفق عليه]

ಇಚ್ಛಿಸಿದಷ್ಟನ್ನು ಬರೆಯುತ್ತಿದ್ದರು. ಅವರಿಗೆ ಬಹಳ ವಯಸ್ಸಾಗಿದ್ದು ತಮ್ಮ ದೃಷ್ಟಿಯನ್ನು ಕಳೆದುಕೊಂಡಿದ್ದರು. ಖದೀಜಾ ಹೇಳಿದರು: ಓ ನನ್ನ ಚಿಕ್ಕಪ್ಪನ ಪುತ್ರರೇ, ನಿಮ್ಮ ಸಹೋದರನ ಮಗನಿಂದ ಕೇಳಿರಿ. ಆಗ ವರಖಾ ಕೇಳಿದರು: ಓ ನನ್ನ ಸಹೋದರನ ಮಗನೇ, ನೀನು ಏನನ್ನು ನೋಡಿದ್ದೀಯಾ? ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ತಾವು ನೋಡಿದ್ದನ್ನು ಅವರಿಗೆ ತಿಳಿಸಿದರು. ಆಗ ವರಖಾ ಹೇಳಿದರು: ಇದು ಅಲ್ಲಾಹು ಪ್ರವಾದಿ ಮೂಸಾ (ಅವರ ಮೇಲೆ ಶಾಂತಿಯಿರಲಿ) ರವರ ಬಳಿಗೆ ಕಳುಹಿಸಿದ ಅದೇ ಜಿಬ್ರೀಲ್ ಆಗಿದ್ದಾರೆ. ಆ ಸಮಯದಲ್ಲಿ ನಾನು ಯುವಕನಾಗಿದ್ದರೆ ಎಷ್ಟು ಚೆನ್ನಾಗಿತ್ತು! ನಿನ್ನ ಜನಾಂಗದವರು ನಿನ್ನನ್ನು ಹೊರಹಾಕುವಾಗ ನಾನು ಬದುಕಿದ್ದರೆ ಎಷ್ಟು ಚೆನ್ನಾಗಿತ್ತು! ಆಗ ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಕೇಳಿದರು: ಅವರು ನನ್ನನ್ನು ಹೊರಹಾಕುವರೇ?! ಅವರು ಹೇಳಿದರು: ಹೌದು. ನೀನು ತಂದಿರುವುದರಂತಹದ್ದನ್ನು ತಂದ ಯಾವೊಬ್ಬ ವ್ಯಕ್ತಿಯೂ ತೊಂದರೆಗೊಳಗಾಗದೆ ಮತ್ತು ದ್ವೇಷಿಸಲ್ಪಡದೆ ಉಳಿದಿಲ್ಲ. ಮತ್ತು ನಿನ್ನ ದಿನವು (ಆ ಸಮಯವು) ನನಗೆ ಸಿಕ್ಕರೆ, ನಾನು ನಿನಗೆ ಪ್ರಬಲವಾದ ಸಹಾಯವನ್ನು ನೀಡುವೆನು. ನಂತರ ಸ್ವಲ್ಪ ಸಮಯದಲ್ಲೇ ವರಖಾ ಮರಣ ಹೊಂದಿದರು, ಮತ್ತು ದೇವವಾಣಿ ಸ್ವಲ್ಪ ಕಾಲದವರೆಗೆ ವಿಳಂಬವಾಯಿತು.

http://www.sunnah.global/hadeeth/kn/show/66303